# <u>ಪ್ರಧಾನ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಅಥಣಿ</u>

## <u>ಕ್ರಿ.ಮಿಸ್ ನಂ. 239/2020</u>

**<u>ಪಿ.ಡಬ್ಲ್ಯೂ-01</u>**

ಇಂದು ದಿನಾಂಕಃ 29/04/2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ಮರಾಠಿ ಭಾಷಿಕರಾಗಿದ್ದು ಕನ್ನಡ ಭಾಷೆ ಬಾರದೆ ಇರುವುದರಿಂದ ಶ್ರೀ. ಎ ಎಸ್ ಎಸ್ ರವರನ್ನು ಕನ್ನಡ ಅನುವಾದಕರನ್ನಾಗಿ ನೇಮಿಸಲಾಯಿತು, ಅನುವಾದಕರ ಶುಲ್ಕ ರೂ.300/- ಗಳನ್ನು ನಿಗದಿಪಡಿಸಲಾಯಿತು ಮತ್ತು ಅವರ ಸಹಾಯದಿಂದ ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.

* * *

<u>ಮುಂದುವರೆದ ಪಾಟೀ ಸವಾಲುಃ- ಎದುರುದಾರರ ಪರ ವಕೀಲರಾದ ಶ್ರೀಮತಿ. ಅರುಣ ರವರಿಂದಃ</u>

1 ನೇ ಎದುರುದಾರನು ನಿಮ್ಮನ್ನು ಮದುವೆಯಾಗುವ ಪೂರ್ವದಲ್ಲಿ ಮತ್ತು ಮದುವೆಯಾದ ನಂತರವು ಪುನಾ ಪಟ್ಟಣದಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. 1 ನೇ ಎದುರುದಾರನು ರಜೆ ದಿನಗಳಲ್ಲಿ ಕೊಲ್ಲಾಪೂರಕ್ಕೆ ಬರುತ್ತಿದ್ದರು ಎಂದರೆ ಸರಿ. 2020 ರಲ್ಲಿ ಕೋವಿಡ್ ಕಾರಣದಿಂದಾಗಿ 1 ನೇ ಎದುರುದಾರನು ಕೊಲ್ಲಾಪೂರಕ್ಕೆ ಬಂದಿರುತ್ತಾನೆ ಎಂದರೆ ಸರಿ. ಸದರಿ ಸಮಯದಲ್ಲಿ, 1 ನೇ ಎದುರುದಾರನು ನಮ್ಮ ತಂದೆ ತಾಯಿ ಮತ್ತು ನಿಮ್ಮೊಟ್ಟಿಗೆ ಇದ್ದರು ಎಂದರೆ ಸರಿ. 1 ನೇ ಎದುರುದಾರನ ಮನೆಯವರು 7 ವರೆ ತೊಲೆಯ ಬಂಗಾರದ ಪಾಟಲಿ ಮತ್ತು ಬಿಲ್ವಾರದ ಆಭರಣಗಳನ್ನು ನಿಮಗೆ ನೀಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಭರಣಗಳನ್ನು ನಂತರ ಎದುರುದಾರನು ಕಸಿದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಎದುರುದಾರನು ಯಾವ ಯಾವ ದಿನಾಂಕದಂದು ಬೆಳ್ಳಿ ಮತ್ತು ಬಂಗಾರದ ಆಭಾರಣಗಳನ್ನು ತೆಗೆದುಕೊಂಡು ಬರಲು ಹೇಳಿದ್ದರು ಎಂದರೆ ಸಾಕ್ಷಿಯು ದಿನಾಂಕಗಳನ್ನು ಬರೆದು ಇಡಲು ಹೇಗೆ ಆಗುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಅರ್ಜಿಯಲ್ಲಿ, 2 ನೇ ಎದುರುದಾರಳು, ನಿಮಗೆ ಹಾಕಿಕೊಂಡ ಬಂಗಾರದ ಆಭರಣಗಳನ್ನು ಕೂಡಲೇ ತೆಗೆಯಬೇಕು ಅಂತಾ ಹೇಳಿ ಅವುಗಳನ್ನು 2 ನೇ ಎದುರುದಾರಳು ತೆಗೆದುಕೊಂಡಿರುತ್ತಾಳೆ ಅಂತಾ ನೀವು ಹೇಳಿ ಬರೆಸಿರುತ್ತೀರಿ ಎಂದರೆ ಸರಿ. ನಿಮ್ಮ ಮುಖ್ಯ

ವಿಚಾರಣೆ ಪ್ರಮಾಣ ಪತ್ರದಲ್ಲಿ, ನಿಮ್ಮ ತಂದೆ ತಾಯಿ ಹಾಕಿದ ಬಂಗಾರದ ಆಭರಣಗಳನ್ನು ಕೂಡಲೇ 2 ನೇ ಎದುರುದಾರಳು ತಗೆದುಕೊಂಡಳು ಅಂತಾ ಬರೆಸಿರುತ್ತೀರಿ ಎಂದರೆ ಸರಿ. 1 ನೇ ಎದುರುದಾರನ ಮನೆಯ ಹೆಸರು ಸೋನಪೇಟಕರ್ ಅಂತಾ ಇರುತ್ತದೆ ಎಂದರೆ ಸರಿ. 1 ನೇ ಎದುರುದಾರನು ಪಾಟೀಲ ರಾಯಲ್ ಫ್ಯಾಮಿಲಿಗೆ ಸೇರಿರುತ್ತಾನೆ ಎಂಬುದರ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು 1 ನೇ ಎದುರುದಾರನ ಕುಟುಂಬವು ಪಾಟೀಲ ರಾಯಲ್ ಫ್ಯಾಮಿಲಿಗೆ ಸೇರಿರುತ್ತದೆ ಅಂತಾ ತೋರಿಸುತ್ತಾರೆ ಆ ಕಾರಣ ಆ ಬಗ್ಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರರು ನಿಮಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಟ್ಟ ಬಗ್ಗೆ ನೀವು ಯಾವುದೇ ದಿನಾಂಕವನ್ನು ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ದಿನಾಂಕಗಳನ್ನು ಬರೆದಿಟ್ಟುಕೊಳ್ಳಲು ಆಗುತ್ತದೆಯೇ ಎಂದು ನುಡಿಯುತ್ತಾರೆ. ಎದುರುದಾರರು ನಿಮಗೆ ಯಾರ ಸಮಕ್ಷಮ ಅವಮಾನ ಪಡಿಸಿ ಕಿರುಕುಳ ನೀಡಿದರು ಎಂದರೆ ಸಾಕ್ಷಿಯು ಎದುರುದಾರರ ಮನೆಗೆ ಯಾರೂ ಬರುತ್ತಿರಲಿಲ್ಲ ಮತ್ತು ಪ್ರತ್ಯೇಕವಾಗಿ ಇದ್ದರು ಎಂದು ನುಡಿಯುತ್ತಾರೆ. ಎದುರುದಾರರು ಯಾರ ಸಮಕ್ಷಮ ನಿಮ್ಮ ಒಡವೆಗಳನ್ನು ತೆಗೆದುಕೊಂಡಿರುತ್ತಾರೆ ಎನ್ನುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಎದುರುದಾರರ ಮನೆಗೆ ಯಾರೂ ಬರುತ್ತಿರಲಿಲ್ಲ ಮತ್ತು ಆಗ ಕೋವಿಡ್ ಸಮಯವಿತ್ತು ಎಂದು ನುಡಿಯುತ್ತಾರೆ. ದಿಃ 13.06.2020 ರ ನಂತರ ನಿಮ್ಮ ತವರು ಮನೆಗೆ ನೀವು ಹೋದ ನಂತರ ಎದುರುದಾರರು ಬಂಗಾರದ ಆಭರಣಗಳನ್ನು ತೆಗೆದುಕೊಂಡ ಬಗ್ಗೆ ನೀವು ದೂರನ್ನು ದಾಖಲಿಸಿರುತ್ತೀರಾ ಎಂದರೆ ಸಾಕ್ಷಿಯು ತಾನು ಪೋಲಿಸ ಠಾಣೆಗೆ ಹೋಗಿದ್ದೆವು ಆದರೆ ಠಾಣೆಯಲ್ಲಿ ದೂರನ್ನು ಸ್ವೀಕರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಎದುರುದಾರರು ನಿಮ್ಮ ಬಂಗಾರದ ಆಭರಣಗಳನ್ನು ತೆಗೆದುಕೊಂಡ ಬಗ್ಗೆ ಪೋಲಿಸ ವರೀಷ್ಟಾಧಿಕಾರಿಗಳಿಗೆ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಪೋಲಿಸ ವರೀಷ್ಟಾಧಿಕಾರಿಗಳಿಗೆ ದೂರು ನೀಡುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನೀವು ಮತ್ತು 1 ನೇ ಎದುರುದಾರರು ಜೈನ ಮತಕ್ಕೆ ಸೇರಿರುತ್ತೀರಿ ಎಂದರೆ ಸರಿ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಅವಾಚ್ಯ ಶಬ್ದಗಳನ್ನು ನಮೂದಿಸಿಲ್ಲ ಎಂದರೆ ಸರಿ. ನಿಮಗೆ, 2 ನೇ ಎದುರುದಾರಳು prostitute ನಲ್ಲಿ ತೊಡಗಿಕೊಳ್ಳಲು ಹೇಳಿದ್ದರು ಅಂತಾ ನೀವು ಸುಳ್ಳು ಹೇಳುತ್ತೀರಿ ಎಂದರೆ ಸರಿಯಲ್ಲ. ನೀವು ಮದುವೆಯಾದ ನಂತರ 1 ನೇ ಎದುರುದಾರರ ಮನೆಗೆ 5 ದಿನ ದಾಂಪತ್ಯ ಜೀವನ ಮಾಡಲು ಬಂದಿದ್ದೀರಿ

ನಂತರ 19 ದಿನಗಳ ಕಾಲ ತವರು ಮನೆಯಲ್ಲಿ ಇದ್ದು, ತದನಂತರ ನೀವು 1 ನೇ ಎದುರುದಾರನ ಮನೆಗೆ ವಾಪಸ್ಸು ಬಂದು ದಿಃ 13.06.2020 ರವರೆಗೆ 1 ನೇ ಎದುರುದಾರನ ಮನೆಯಲ್ಲಿ ಇದ್ದೀರಿ, ಆ ಸಮಯದಲ್ಲಿ ನಿಮ್ಮ ತಂದೆ ತಾಯಿ 1 ನೇ ಎದುರುದಾರನ ಮನೆಗೆ ಬಂದಿರಲಿಲ್ಲ ಎಂದರೆ ಸಾಕ್ಷಿಯು ಮೊದಲ ಬಾರಿ ತಾನು 11 ದಿನ ಎದುರುದಾರನ ಮನೆಯಲ್ಲಿ ಇದ್ದೆನು, ನಂತರ ನನ್ನ ತಂದೆ ತಾಯಿ ತನ್ನನ್ನು ತವರು ಮನೆಗೆ ಕರೆದುಕೊಂಡು ಹೋದರು, ಅಲ್ಲಿ 5 ದಿನಗಳ ಕಾಲ ಇದ್ದೆನು ನಂತರ ಎದುರುದಾರನ ಮನೆಗೆ ಜೀವನ ಮಾಡಲು ಹೋಗಿದ್ದೆನು ಎಂದು ನುಡಿಯುತ್ತಾರೆ.

ಎದುರುದಾರರು ಯಾವ ಕಾರಣಕ್ಕಾಗಿ ಎದುರುದಾರರು ಮಾನಸಿಕ ದೈಹಿಕ ಕಿರುಕುಳ ಕೊಟ್ಟರು ಅಂತಾ ನೀವು ನಮೂದಿಸಿಲ್ಲ ಎಂದರೆ ಸಾಕ್ಷಿಯು ಬಂಗಾರ ಬೆಳ್ಳಿ ತೆಗೆದುಕೊಂಡು ಬರಲು ಹೇಳಿದ ಕಾರಣವನ್ನು ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ಮೇ, 2020 ರಲ್ಲಿ ನೀವು 2 ತಿಂಗಳ ಕಾಲ ಗರ್ಭವತಿ ಆಗಿದ್ದೀರಿ ಎಂದರೆ ಸರಿ. 1 ನೇ ಎದುರುದಾರನು ನೀವು ಗರ್ಭವತಿ ಇದ್ದಾಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸಾಕ್ಷಿಯು ಅಬಾರ್ಸನ್ ಮಾಡಿಸುವದಕ್ಕಾಗಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದು ನುಡಿಯುತ್ತಾರೆ.

ನಿಮ್ಮ ಅರ್ಜಿಯ 3 ನೇ ಖಂಡಿಕೆಯಲ್ಲಿ " That in the month of may, he put a condition and warned to the applicant that applicant must heed the conditions of his mother otherwise will have cohabitation with her unless she agrees the conditions of the respondent No. 2" ಅಂತಾ ಬರೆಸಿರುತ್ತೀರಿ ಎಂದರೆ ಸರಿ, ಸದರಿ ಅರ್ಜಿಯ ಭಾಗವನ್ನು ನಿ.ಆರ್. 1 ಎಂದು ಗುರುತಿಸಲಾಯಿತು. ನಿಮ್ಮ ಸಾಕ್ಷಿ ಪ್ರಮಾಣ ಪತ್ರದ 3 ನೇ ಖಂಡಿಕೆಯಲ್ಲಿ "Even respondent No.1 started giving me physical and mental harassment and even the respondent No.1 warned me to follow the conditions of respondent No.2 and also told on my face that he will not co-habit with me if the conditions of respondent No.2 are not fulfilled." ಅಂತಾ ಬರೆಸಿರುತ್ತೀರಿ ಎಂದರೆ ಸರಿ, ಸದರಿ ಅರ್ಜಿಯ ಭಾಗವನ್ನು ನಿ.ಆರ್. 2 ಎಂದು ಗುರುತಿಸಲಾಯಿತು.

ನೀವು, 1 ನೇ ಎದುರುದಾರನು ನೆರೆ ಹೊರೆಯವರೊಂದಿಗೆ ಮಾತನಾಡುವುದನ್ನು ತಡೆ ಉಂಟು ಮಾಡಿದ್ದನು ಎಂದು ಹೇಳಿದ್ದು ಸದರಿ ನೆರೆಹೊರೆಯವರ ಹೆಸರು ಏನು ಇರುತ್ತದೆ ಎಂದರೆ ಸಾಕ್ಷಿಯು ನನಗೆ

ನೆರೆಹೊರೆಯವರ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನೆರೆ ಹೊರೆಯವರನ್ನು ಕರೆದುಕೊಂಡು ಬಂದು ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿಯು ಅವರು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಎದುರುದಾರರು ನಿಮಗೆ ಯಾವತ್ತೂ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನಿಮ್ಮನ್ನು ಮಗಳ ತರಹ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಮಾನ್ಯ ಎದುರುದಾರ ಪರ ವಕೀಲರು ತಮಗೆ ಚುನಾವಣೆ ನಿಮಿತ್ತವಾಗಿ ತುರ್ತು ಕೆಲಸ ಇರುತ್ತದೆ ಆ ಕಾರಣ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ, ಆ ಕಾರಣ ಕೊನೆಯ ಬಾರಿಗೆಂದು ಪಾಟೀ ಸವಾಲಿಗೆ ಮುಂದೂಡಲಾಯಿತು.)

ಸಾಕ್ಷಿಯ ಹೇಳಿಕೆಯನ್ನು ಕನ್ನಡಕ್ಕೆ ಅನುವಾದಿಸಿ ಹೇಳಿರುವುದು ಸರಿ ಮತ್ತು ನಿಜ ಇರುತ್ತದೆ ಎಂದು ದೃಢೀಕರಿಸುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

(ಜಗದೀಶ ಬಿಸೇರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ